48

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/49/2014-15. ದಿನಾಂಕ:21-06-2016.

| ವಾದಿಗಳು | ಪ್ರತಿವಾದಿಗಳು |
|---|---|
| ದಿಂಡಿ ಸಿದ್ದಮ್ಮ ಗಂಡ ಲೇಟ್ ದಿಂಡಿ ರಾಜಪ್ಪ<br>ಗಾಣಾಗಟ್ಟೆ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ನಿಂಬಳಗೇರಿ ಗ್ರಾಮದ ಸನಂ 649ಬಿ. ವಿಸ್ತೀರ್ಣ 2-38.ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ನಿಂಬಳಗೇರಿ ಗ್ರಾಮದ ಸನಂ 649ಬಿ. ವಿಸ್ತೀರ್ಣ 2-38. ಎಕ್ರೆ ಜಮೀನನ್ನು ಸದರಿ ತಾಲೂಕು ಗಾಣಾಗಟ್ಟೆ ಗ್ರಾಮದ ದಿಂಡಿ ಸಿದ್ದಮ್ಮ ಗಂಡ ಲೇಟ್ ದಿಂಡಿ ರಾಜಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ನಿಂಬಳಗೇರಿ ಇವರು ನಮೂನೆ-21 ನೋಟಿಸನ್ನು ದಿನಾಂಕ 19-10-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಅರ್ಜಿದಾರರು ಮರಣ ಪ್ರಮಾಣ ಪತ್ರ ಸಲ್ಲಿಸಿಲ್ಲದ ಕಾರಣ ಹಾಗೂ ಮೂಲ ಪಟ್ಟದಾರರು ಪ್ರಾಥಮಿಕ ಕೃಷಿ ಪತ್ತಿನ ಕೃಷಿ ಸಹಾಕಾರ ಸಂಘ ನಿಂಬಳಗೇರಿ ಇವರಲ್ಲಿ ಸಾಲ ಪಡೆದ ಬಗ್ಗೆ ಆಯ್ಕೆ ನಮೂದಾಗಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 26/2014-15. ದಿನಾಂಕ 26-11-2014 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 24-02-2015 ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ನಿಂಬಳಗೇರಿ ಗ್ರಾಮದ ಸನಂ 649ಬಿ. ವಿಸ್ತೀರ್ಣ 2-38. ಎಕ್ರೆ ಜಮೀನು ನನ್ನ ಗಂಡನಾದ ದಿಂಡಿ ರಾಜಪ್ಪ ತಂದೆ ಲೇಟ್ ದಿಂಡಿ ಓಬಯ್ಯ ಇವರ ಹೆಸರಲ್ಲಿ ಲೆಕ್ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 20-08-2002 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೊತಿವಾರಸು ಹಕ್ಕಿನ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ಬಗ್ಗೆ ಗ್ರಾಮಲೆಕ್ಕಿಗರು ಹಾಗೂ

ಕಂದಾಯ ಪರಿವೀಕ್ಷಕರು ಗ್ರಾಮದಲ್ಲಿ ಮರು ವಿಚಾರಣೆ ಮಾಡಲಾಗಿ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಹೇಳಿಕೆಗಳೊಂದಿಗೆ ವರದಿ ಸಲ್ಲಿಸಿರುತಿತ್ತಾರೆ. ಕಾರಣ ಈ ಕೆಳಗಿನಂತೆ ಈ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ನಿಂಬಳಗೇರಿ ಗ್ರಾಮದ ಸನಂ 649ಬಿ. ವಿಸ್ತೀರ್ಣ 2-38. ಎಕ್ರೆ ಜಮೀನನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ದಿಂಡಿ ಸಿದ್ದಮ್ಮ ಗಂಡ ಲೇಟ್ ದಿಂಡಿ ರಾಜಪ್ಪ ಗಾಣಾಗಟ್ಟೆ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ದಿಂಡಿ ಸಿದ್ದಮ್ಮ ಗಂಡ ಲೇಟ್ ದಿಂಡಿ ರಾಜಪ್ಪ ಗಾಣಾಗಟ್ಟೆ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.